Sri Siddaramaiah: You will have your chance. ಆಗ ಹೇಳಿ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ. ಶ್ರೀ ಎಸ್.ಆರ್.ಮಹೇಶ್, ಪ್ರಶ್ನೆಯನ್ನು ಕೇಳಿ. ಬಚ್ಚೇಗೌಡರೆ, ಕುಳಿತುಕೊಳ್ಳಿ, ನೀವು ಆಮೇಲೆ ಹೇಳಿ, ಪ್ಲೀಸ್.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೀವು ನಮಗೆ ಈ ರೀತಿ ಮಾಡಿ, ರಕ್ಷಣೆ ಕೊಡದೇ ಹೋದರೆ ಬಹಳ ಕಷ್ಟವಾಗಿಬಿಡುತ್ತದೆ. ನೀವು ನಗುತ್ತಿದ್ದೀರಿ. ನಮಗೆ ಇಲ್ಲಿ ಸಂಕಟವಾಗುತ್ತಿದೆ.

ಅಧ್ಯಕ್ಷರು:ಏನೂ ಇಲ್ಲ, ಎಲ್ಲರೂ ನಗೋಣ.

2. **ಪ್ರಶ್ನೋತ್ತರ:**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ಉತ್ತರಗಳು.

ಕೆಟ್ಟಿರುವ ಟ್ರಾನ್ಸ್‌ಫಾರ್ಮರ್‌ಗಳ ಮಾಹಿತಿ ಬಗ್ಗೆ.

16 (95) ಶ್ರೀ ಎಸ್. ಆರ್. ಮಹೇಶ್ (ಕೃಷ್ಣರಾಜ ನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಹಾಗೂ ಹಾಸನ ಜಿಲ್ಲೆಗಳ ಬೆಸ್ಕಾಂ ವಿದ್ಯುಚ್ಛಕ್ತಿ ಮಂಡಳಿಯ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೂ ಕೆಟ್ಟಿರುವ ಟ್ರಾನ್ಸ್‌ಫಾರ್ಮರ್‌ಗಳ (ಟಿ.ಸಿ) ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು).

ಆ) ದುರಸ್ತಿಗೊಳಪಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು (ಟಿ.ಸಿ) ಸರಿಪಡಿಸಲು ತೆಗೆದುಕೊಳ್ಳುವ ಸಮಯಾವಕಾಶವೆಷ್ಟು ಹಾಗೂ ನಿಯಮಾನುಸಾರ ಎಷ್ಟು ದಿನಗಳಲ್ಲಿ ದುರಸ್ತಿ ಪಡಿಸಿ ವಿದ್ಯುಚ್ಛಕ್ತಿಯ ಸಂಪರ್ಕವನ್ನು ನೀಡಲಾಗುವುದು?

ಇ) ಕೆ.ಆರ್. ನಗರ ಹಾಗೂ ಸಾಲಿಗ್ರಾಮ ಉಪ ವಿಭಾಗ ವ್ಯಾಪ್ತಿಯಲ್ಲಿ ಹಲವಾರು ಸಮಯದಿಂದ ಕೆಟ್ಟು ಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು (ಟಿ.ಸಿ) ದುರಸ್ತಿಗೊಳಿಸದಿರುವುದರಿಂದ ರೈತರಿಗೆ ಹಾಗೂ ನಾಗರೀಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಇವುಗಳನ್ನು ದುರಸ್ತಿಗೊಳಿಸಿ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯಾಪ್ತಿಯಲ್ಲಿನ ಮೈಸೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೂ ಕೆಟ್ಟಿರುವ ಪರಿವರ್ತಗಳ ತಾಲ್ಲೂಕುವಾರು ಮಾಹಿತಿಯು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	07–08	08–09	09–10	10–11
1	ಮೈಸೂರು	ಮೈಸೂರು	253	250	281	123
		ನಂಜನಗೂಡು	333	322	284	87
		ಟಿ.ನರಸೀಪುರ	221	207	197	82
		ಹುಣಸೂರು	104	97	149	52
		ಕೆ.ಆರ್.ನಗರ	76	82	84	37
		ಪಿರಿಯಾಪಟ್ಟಣ	140	142	178	66
		ಹೆಚ್.ಡಿ. ಕೋಟೆ	201	181	157	63
ಒಟ್ಟು			**1328**	**1281**	**1330**	**510**
2	ಹಾಸನ	ಹಾಸನ	357	236	183	100
		ಆಲೂರು	72	68	82	42
		ಬೇಲೂರು	100	155	67	21
		ಸಕಲೇಶಪುರ	74	50	50	18
		ಚನ್ನರಾಯಪಟ್ಟಣ	637	567	605	201
		ಅರಸೀಕೆರೆ	473	527	455	120
		ಹೊಳೇನರಸೀ	139	155	115	46

		ಪುರ				
		ಅರಕಲಗೂಡು	175	118	148	58
ಒಟ್ಟು			2027	1876	1705	606

ಆ) ದುರಸ್ತಿಗೊಳಪಟ್ಟ ಪರಿವರ್ತಕಗಳನ್ನು ನಿಯಾಮಾನುಸಾರ ನಗರ ಪ್ರದೇಶದಲ್ಲಿ 24 ಗಂಟೆಯೊಳಗೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ 72 ಗಂಟೆಗಳೊಳಗೆ ಬದಲಾಯಿಸಿ ವಿದ್ಯುತ್ ಸಂಪರ್ಕ ನೀಡಲಾಗುವುದು.

ಇ) ಕೆ.ಆರ್.ನಗರ ಹಾಗೂ ಸಾಲಿಗ್ರಾಮ ಉಪವಿಭಾಗ ವ್ಯಾಪ್ತಿಯಲ್ಲಿ ಕೆಟ್ಟು ಹೋದ ಟ್ರಾನ್ಸ್ ಫಾರ್ಮರ್‌ಗಳ ವಿಷಯ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ತುರ್ತಾಗಿ ದುರಸ್ತಿಗೊಳಿಸಿ ವಿದ್ಯುತ್‌ಚ್ಛಕ್ತಿ ಒದಗಿಸುವಂತೆ ಕ್ರಮ ಕೈಗೊಳ್ಳಲಾಗಿದೆ.

ಈ) ಕೆ.ಆರ್.ನಗರ ಹಾಗೂ ಸಾಲಿಗ್ರಾಮ ಉಪ-ವಿಭಾಗಗಳು ಅನುಕ್ರಮವಾಗಿ ಮೈಸೂರು ವೃತ್ತ ಹಾಗೂ ಹಾಸನ ವೃತ್ತ ವ್ಯಾಪ್ತಿಗೆ ಸೇರಿದ್ದು, ಮೈಸೂರು ಚಾಮರಾಜನಗರ, ಹಾಸನ, ಚನ್ನರಾಯಪಟ್ಟಣ ಹಾಗೂ ಅರಸೀಕೆರೆಗಳಲ್ಲಿ ಟ್ರಾನ್ಸ್ ಫಾರ್ಮರ್ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಈ ದುರಸ್ತಿ ಕೇಂದ್ರಗಳಲ್ಲಿ ಪರಿವರ್ತಕಗಳನ್ನು ದುರಸ್ತಿಗೊಳಿಸಿ ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಹೆಚ್. ಡಿ. ರೇವಣ್ಣ (ಶ್ರೀ ಎಸ್. ಆರ್. ಮಹೇಶ್ ಅವರ ಪರವಾಗಿ): ಮೈಸೂರು ಜಿಲ್ಲೆ ಮತ್ತು ಹಾಸನ ಜಿಲ್ಲೆಯಲ್ಲಿ transformers ಕೆಟ್ಟು ಹೋಗಿ ಸುಮಾರು ಮೂರ್ನಾಲ್ಕು ತಿಂಗಳುಗಳು ಆಗಿವೆ. ಮುಖ್ಯಮಂತ್ರಿಗಳೇ ಇವತ್ತು ಇಂಧನ ಖಾತೆಯನ್ನು ನಿರ್ವಹಿಸುತ್ತಿದ್ದಾರೆ. ಕೆಲವು ಕಡೆ transformers repair ಇಲ್ಲ, ಹೊಸ transformer ಇಲ್ಲ ಅವರೇ ಈಗ ಮಾಹಿತಿ ಕೊಟ್ಟಿರುವ ಪ್ರಕಾರ್ ಸುಮಾರು 606 transformers ಪೂರ್ತಿ ಕೆಟ್ಟುಹೋಗಿವೆ ಎಂದು ಹೇಳುತ್ತಿದ್ದಾರೆ. ಅದರ ಜೊತೆಗೆ ಎಷ್ಟು ದಿವಸಗಳಲ್ಲಿ transformers ರಿಪೇರಿ ಮಾಡುತ್ತಾರೆಂದು ಕೇಳಿದರೆ "ದುರಸ್ತಿಗೊಳಪಟ್ಟ ಪರಿವರ್ತಕಗಳನ್ನು ನಿಯಮಾನುಸಾರ ನಗರ ಪ್ರದೇಶದಲ್ಲಿ 24 ಗಂಟೆಯೊಳಗೆ ಹಾಗೂ

ಗ್ರಾಮಾಂತರ ಪ್ರದೇಶಗಳಲ್ಲಿ 72 ಗಂಟೆಗಳೊಳಗೆ ಬದಲಾಯಿಸಿ ವಿದ್ಯುತ್ ಸಂಪರ್ಕ ನೀಡಲಾಗುವುದು" ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಮೂರು ತಿಂಗಳುಗಳಾದರೂ transformers ಹಾಕಿಲ್ಲ. ದಯವಿಟ್ಟು transformers ಖರೀದಿ ಮಾಡಲಿಕ್ಕೆ ಸರ್ಕಾರದಲ್ಲಿ ಏನಾದರೂ ದುಡ್ಡು ಇದೆಯೇ ಇಲ್ಲವೇ? ರಿಪೇರಿ ಮಾಡಲಿಕ್ಕೆ ಸರ್ಕಾರದಲ್ಲಿ ಏನಾದರೂ ದುಡ್ಡು ಇದೆಯೇ ಇಲ್ಲವೇ? ರಿಪೇರಿ ಮಾಡಲಿಕ್ಕೆ ಆಗುತ್ತಿಲ್ಲವೇ ಏನು ಎಂಬುದನ್ನು ದಯಮಾಡಿ ಹೇಳಲಿ. ಮುರ್ನಾಲ್ಕು ತಿಂಗಳುಗಳಾದರೂ transformers ಇಲ್ಲ. ಕುಡಿಯುವ ನೀರಿನ ಪರಿಸ್ಥಿತಿ ಏನಾಗಬೇಕು? ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ಪರಿಸ್ಥಿತಿ ಏನಾಗಬೇಕು? ಇದಕ್ಕೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸನ್ಮಾನ್ಯ ರೇವಣ್ಣನವರು ಈ ಇಲಾಖೆಯನ್ನು ಬಹಳ ವರ್ಷಗಳ ಕಾಲ ನಡೆಸಿದಂಥವರು. ಆ ಸಮಸ್ಯೆಗೆ ಪರಿಹಾರವೇನು ಎಂದು ಹುಡುಕಲಿಕ್ಕೆ ನೀವು ಪ್ರಯತ್ನ ಮಾಡಿದ್ದೀರಿ, ನಾವು ಪ್ರಯತ್ನ ಮಾಡಿದ್ದೇವೆ. Transformers ಸುಡುವುದರಿಂದ, ರಿಪೇರಿ ಮಾಡುವುದಕ್ಕೆ ತಡವಾಗುವುದರಿಂದ ಜನತೆಗೆ, ವಿಶೇಷವಾಗಿ ರೈತರಿಗೆ ತೊಂದರೆಯಾಗುತ್ತದೆಂದು ಈ ವಿಷಯವನ್ನು ನೀವು ಪ್ರಸ್ತಾಪ ಮಾಡ್ದಿದ್ದೀರಿ. ನಿಮಗೆ ಗೊತ್ತಿರುವಂತೆ ರೇವಣ್ಣನವರೆ, ಈಗಿರುವ ಅಂಕಿಅಂಶವನ್ನು ನೋಡಿದ್ದೇನೆ. Transformer ವರ್ಷಕ್ಕೆ 10% failure ಆಗುತ್ತಿವೆ. Executive Engineer ಕಛೇರಿಯ ವ್ಯಾಪ್ತಿಯಲ್ಲಿ ರಿಪೇರಿ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇಂಥ ಕಛೇರಿಯಲ್ಲಿ ಒಂದು ತಿಂಗಳಿಗೆ 150 transformers ಅನ್ನು ರಿಪೇರಿ ಮಾಡುತ್ತಿದ್ದಾರೆ. ತಮಗೆ ಗೊತ್ತಿರುವಂತೆ over load ಆಗಿ transformers failure ಆಗುತ್ತಿವೆ. ಬೇರೆಬೇರೆ defective situation ನಿಂದ ಈ ಪರಿಸ್ಥಿತಿ ಬರುತ್ತಿದೆ. ಈಗ ನಾವು ಈ defect ಇರಬಾರದು ಎಂಬ ದೃಷ್ಟಿಯಿಂದ ಈ ರಾಜ್ಯದ ಕರ್ನಾಟಕ ವಿದ್ಯುತ್ ಕಾರ್ಖಾನೆಯಿಂದ transformers ಅನ್ನು ಎಲ್ಲಾ ಎಸ್ಕಾಂಗಳು ಖರೀದಿ

ಮಾಡಬೇಕೆಂದು ತೀರ್ಮಾನಿಸಿದ್ದೇವೆ. failure ಅನ್ನು ಕೆಡಿಮೆ ಮಾಡುವುದಕ್ಕೆ star rated transformers ಎಲ್ಲಾ ರಾಜ್ಯದ ಭಾಗಗಳಲ್ಲಿ ಹಾಕುತ್ತಿದ್ದೇವೆ. ನಿಮ್ಮ ಕಳಕಳಿ ಏನೆಂದರೆ ಬೇಗ ರಿಪೇರಿ ಆಗಿ ರೈತರಿಗೆ, ಜನಸಾಮಾನ್ಯರಿಗೆ ಅನುಕೂಲವಾಗಬೇಕು ಎಂಬುದು. ಇದು ಬಹಳ ಉತ್ತಮವಾದ ಪ್ರಶ್ನೆ ಒಳ್ಳೆಯ ಸಲಹೆ. ನಿಮ್ಮ ಅನುಭವದಲ್ಲಿ ನೀವೇನು ಮಾಡಬಹುದು ಎಂದು ದಯಾಮಾಡಿ ಸಲಹೆ ಕೊಡಿ, ಆಮೇಲೆ ಬೇಕಾದರೂ ನಾನು ನಿಮ್ಮನ್ನು ಕರೆಯುತ್ತೇನೆ. ಈಗ ಬೇಕಾದರೂ ಪ್ರಶ್ನೋತ್ತರ ಆದ ಮೇಲೆ ತಿಳಿಸಿ ನೀವೇನು ನಿಮ್ಮ ಅನುಭವದ ಆಧಾರದ ಮೇಲೆ ಇದನ್ನು ಸುಧಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೀರಾ, ಆ ಪ್ರಯತ್ನವನ್ನು ಖಂಡಿತವಾಗಿ ನಾವು ಮಾಡೋಣ. ಅದರ ಬಗ್ಗೆ ಎರಡು ಮಾತಿಲ್ಲ, ಅದಕ್ಕೆ ನಾನು ಬದ್ದನಾಗಿದ್ದೇನೆ. ರೈತರಿಗೆ ನೆರವು ಕೊಡುವಂಥದ್ದು ಅಗತ್ಯತೆ ಇದೆ. ಇದರ ಬಗ್ಗೆ ನಾನು ಗಮನ ಕೊಡುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.ಎಸ್. ಹಲವು ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಇದರ ಬಗ್ಗೆ ಎಲ್ಲರೂ ಕೇಳಲಿಕ್ಕೆ ಆಗುವುದಿಲ್ಲ. ಇದು ಕೆ.ಆರ್. ನಗರಕ್ಕೆ ಮೈಸೂರು ಜಿಲ್ಲೆಗೆ ಸಂಬಂಧಪಟ್ಟದ್ದಾಗಿದೆ. ಈ ರೀತಿ ಪ್ರಶ್ನೋತ್ತರ ನಡೆದರೆ ಆಗುವುದಿಲ್ಲ, No, No, I will not allow. ಈಗ ಎಲ್ಲವೂ ಪ್ರಮುಖವಾದ ವಿಚಾರವೇ ಆಗಿರುತ್ತದೆ. ಇದರಲ್ಲಿ ಅವಕಾಶ ಕೊಡುವುದಕ್ಕಾಗುವುದಿಲ್ಲ. ಈಗ ಎಸ್.ಆರ್.ಮಹೇಶ್‌ರವರ ಪರವಾಗಿ ರೇವಣ್ಣನವರು ಕೇಳಿದ್ದಾರೆ. ಅವರು ಪತ್ರವನ್ನೂ ಸಹ ಕೊಟ್ಟಿಲ್ಲ. ಆದರೂ ಸಹ ನಾನು ಅವಕಾಶ ಕೊಟ್ಟಿದ್ದೇನೆ. No, No. ಇಲ್ಲ ಅವಕಾಶ ಕೊಡುವುದಿಲ್ಲ. ತಾವು ಬೇರೆ ರೂಪದಲ್ಲಿ ತನ್ನಿ ಚರ್ಚೆ ಮಾಡೋಣ.

ಒಬ್ಬ ಮಾನ್ಯ ಸದಸ್ಯರು : ಇಡೀ ರಾಜ್ಯದಾದ್ಯಂತ ಈ ಸಮಸ್ಯೆ ಇದೆ. ಅದಕ್ಕಾಗಿ ಈ ಬಗ್ಗೆ ಚರ್ಚೆ ಮಾಡಲಿಕ್ಕೆ ಅರ್ಧ ಗಂಟೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಅದನ್ನು ಬೇರೆ ರೂಪದಲ್ಲಿ ತನ್ನಿ, ಚರ್ಚೆಗೆ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ ಪ್ಲೀಸ್.

ಶ್ರೀ ಟಿ. ಬಿ. ಜಯಚಂದ್ರ : ಇದು ಒಂದೆರಡು ದಿವಸಗಳ ಪ್ರಶ್ನೆ ಇಲ್ಲ. ಇಡೀ ರಾಜ್ಯದಲ್ಲಿರುವ ಸಮಸ್ಯೆ ಆಗಿದೆ. ಇದಕ್ಕೇನಾದರೂ ಪರಿಹಾರ ಕಾರ್ಯಕ್ರಮ ಇದೆಯೇ ಎಂದು ತಾವು ಒಂದು ಮಾತನ್ನು ಕೇಳಿದ್ದೀರಿ. ನಿಮಗೆ repair centres ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ sub division ನಲ್ಲಿವೆ. ಇತ್ತೀಚಿನ ನಾಲ್ಕೈದು ದಿವಸಗಳ ಹಿಂದೆ ನಾನೇ ಆ ರಿಪೇರಿ ಸೆಂಟರ್ಸ್‌ಗೆ ಹೋಗಿದ್ದೆ. ಅಲ್ಲಿ ಏನಾಗಿದೆ ಎಂದರೆ ಕೆ.ಇ.ಬಿ. ಯಿಂದ ಕೊಡತಕ್ಕಂತಹ ಆಯಿಲ್ ಸಪ್ಲೈ ಆಗುತ್ತಿಲ್ಲ. ಆಯಿಲ್ ಸಪ್ಲೈ ಆಗದೇ ಇರುವುದು ಒಂದು ಕಾರಣ. ಇನ್ನೊಂದು ಮುಖ್ಯವಾದ ಕಾರಣವೇನೆಂದರೆ, ರಿಪೇರಿ ಮಾಡಿ ಒಂದೆರಡು ವರ್ಷಗಳಾದರೂ ಕೂಡ ಅವರಿಗೆ ಬಿಲ್ ಪೇಮೆಂಟ್ ಆಗುತ್ತಿಲ್ಲ. ಇದು ಮುಖ್ಯವಾದ ಕಾರಣ. ರಿಪೇರಿ ಸೆಂಟರ್ಸ್‌ಗೆ ಎಲ್ಲಾ ರೀತಿಯಾದ ಸವಲತ್ತುಗಳನ್ನು ನೀವು ಕೊಡುವುದಕ್ಕೆ ತಯಾರಾದರೆ ಬಹುಶಃ ಸಮಸ್ಯೆಗಳನ್ನು ಬಗೆಹರಿಸಬಹುದು. ಮಾನ್ಯ ಮುಖ್ಯಮಂತ್ರಿಗಳೆ ಇದು ಏಕೆ ಈ ರೀತಿಯಾಗಿದೆ ಎಂದರೆ ಈ ಸಲ ಮಳೆ ಕಡಿಮೆ ಗಾಳಿ ಜಾಸ್ತಿ. ಗಾಳಿಯಿಂದಾಗಿ ಟ್ರಾನ್ಸ್ ಫಾರ್ಮರ್ಸ್ ಸಿಕ್ಕಾಪಟ್ಟೆ ಸುಟ್ಟು ಹೋಗಿವೆ. ನನ್ನ ಒಂದೇ ಕ್ಷೇತ್ರಕ್ಕೆ ಸುಮಾರು 45 ಟ್ರಾನ್ಸ್ ಫಾರ್ಮರ್‌ಗಳನ್ನು ಇವತ್ತು ಕೊಡಬೇಕಾಗುತ್ತದೆ. ಪ್ರತಿನಿತ್ಯ ನಾವು ಸಂಪರ್ಕದಲ್ಲಿರುತ್ತೇವೆ. 45 ಟಿ.ಸಿ. ಕೊಡಬೇಕಾಗುತ್ತದೆ. ದಿನದಿನಕ್ಕೂ ಬ್ಯಾಕ್‌ಲಾಗ್ ಜಾಸ್ತಿಯಾಗುತ್ತಿದೆಯೇ ವಿನಾ ಕಡಿಮೆಯಾಗುತ್ತಿಲ್ಲ. ದಯಮಾಡಿ ರಿಪೇರಿ ಸೆಂಟರ್ಸ್‌ಅನ್ನು activise ಮಾಡುವುದಕ್ಕೆ ನೀವು ಚುರುಕಾದಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಬಹುಶಃ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಹೆಚ್. ಡಿ. ರೇವಣ್ಣ : ದಯಮಾಡಿ ಒಂದು ನಿಮಿಷ ಮಾತನಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು . . . . . .

(ಗೊಂದಲ)

ಅಧ್ಯಕ್ಷರು : ನಿಮ್ಮ ಮಾತು ಕೇಳುವುದಕ್ಕೆ ನೀವು ಪತ್ರವನ್ನು ಕೊಟ್ಟಿಲ್ಲ. Importance ಎಂದು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟೆ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಮುಖ್ಯಮಂತ್ರಿಗಳ ಇಲಾಖೆಯವರು ಮಾಹಿತಿ ಕೊಟ್ಟಿರುವ ಪ್ರಕಾರ ಹಾಸನದ ತಾಲ್ಲೂಕು ಒಂದರಲ್ಲಿಯೇ 100 ಟ್ರಾನ್ಸ್ ಫಾರ್ಮರ್ಸ್ ಹೋಗಿದೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 200 ಟ್ರಾನ್ಸ್ ಫಾರ್ಮರ್ಸ್ ಹೋಗಿದೆ. ಅದೇ ರೀತಿ ನಮ್ಮ ಹೊಳೆನರಸೀಪುರದಲ್ಲಿ ಸುಮಾರು 50 ಟ್ರಾನ್ಸ್ ಫಾರ್ಮರ್ಸ್ ಹೋಗಿದೆ. ನನ್ನ ಕ್ಷೇತ್ರಕ್ಕೆ ಮೂರು ತಾಲ್ಲೂಕುಗಳು ಬರುತ್ತವೆ. ಚನ್ನರಾಯಪಟ್ಟಣ, ಹಾಸನ ಹಾಗೂ ಹೊಳೆನರಸೀಪುರ ಈ ಮೂರು ತಾಲ್ಲೂಕುಗಳು ಬರುತ್ತವೆ. ಅರಕಲಗೂಡು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇಲ್ಲಿಯೇ ಮಾನ್ಯ ಮಂಜುರವರು ಇದ್ದಾರೆ. ಅವರ ಕ್ಷೇತ್ರದಲ್ಲಿ 56 ಟ್ರಾನ್ಸ್ ಫಾರ್ಮರ್ಸ್ ಹೋಗಿದೆ ಎಂದು ಹೇಳಿದ್ದಾರೆ. ಸುಮಾರು 600 ಟ್ರಾನ್ಸ್ ಫಾರ್ಮರ್ಸ್ ನಮ್ಮ ಜಿಲ್ಲೆಯಲ್ಲಿಯೇ ಹೋಗಿದೆ. ಹೊಸ ಟ್ರಾನ್ಸಾಫಾರ್ಮರ್ ಹಾಕಿ ಎಂದು ಕೇಳಿದರೆ ಮೈಸೂರಿನ ಚಾಮುಂಡೇಶ್ವರಿ ಎಲೆಕ್ಟ್ರಿಸಿಟಿ ಸಪ್ಲೈ ಕಂಪನಿಯ ಎಂ.ಡಿ.ಯವರು ಒಂದು ರೂಪಾಯಿ ಡುಡ್ಡಿಲ್ಲವೆಂದು ಹೇಳುತ್ತಾರೆ. ರಿಪೇರಿ ಮಾಡುವ ಬಗ್ಗೆ ಮಾನ್ಯ ಜಯಚಂದ್ರರವರು ಏನು ಹೇಳಿದರು ಹಾಗೆಯೇ ಒಂದು ವರ್ಷದಿಂದ ರಿಪೇರಿ ಬಿಲ್ ಕೊಟ್ಟಿಲ್ಲ. ಕೆಲವು ಕಡೆಗಳಲ್ಲಿ ಆಯಿಲ್ ಇಲ್ಲ. ಈ ಪರಿಸ್ಥಿತಿ ಇದ್ದು, ರೈತರಿಗೆ ಐ.ಪಿ.ಸೆಟ್‌ನಲ್ಲಿ ಒಂದು ಗಂಟೆ ಕರೆಂಟ್ ಇಲ್ಲ ಮೂರು-ನಾಲ್ಕು ದಿನ ಕರೆಂಟ್ ಇಲ್ಲ. ಐ.ಪಿ.ಸೆಟ್ ಹಾಳು ಬಿದ್ದು ಹೋಗಲಿ, ಆದರೆ, ಕುಡಿಯುವ ನೀರಿಗೆ ಹಾಗೂ ಊರಿನಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಏನು ಮಾಡುವುದು? ಊರಿನಲ್ಲಿ ಕರೆಂಟ್ ಬಂದು 3-4 ತಿಂಗಳು ಆಗಿದೆ. ಈ ಬಗ್ಗೆ ಬೇಕಾದರೆ ಮಾಹಿತಿಯನ್ನು ತರಿಸಿಕೊಳ್ಳಲಿ.

(ಗೊಂದಲ)

ಅಧ್ಯಕ್ಷರು : ಪ್ರಶ್ನೆ ಕೇಳಿ.

ಶ್ರೀ ಹೆಚ್. ಡಿ. ರೇವಣ್ಣ : 72 ಗಂಟೆಗಳಲ್ಲಿ ರಿಪೇರಿ ಮಾಡುತ್ತೇವೆ ಎಂದು ಹೇಳುತ್ತಾರೆ. 72 ಗಂಟೆಗಳಲ್ಲಿ ರಿಪೇರಿ ಮಾಡದೇ 600 ಟ್ರಾನ್ಸ್ ಫಾರ್ಮರ್ಸ್ ಹಾಗೆಯೇ ಇವೆಯಲ್ಲಾ? ಅದು ಇಲ್ಲವೆಂದು ಬಿಟ್ಟರೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತಾರಾ ಎಂದು ದಯಮಾಡಿ ಕೇಳಿ. ಮಾನ್ಯ

ಮುಖ್ಯಮಂತ್ರಿಗಳು ದಯಮಾಡಿ, ಇದು Serious ಇದೆ. ಬೇಕಾದರೆ ನಮ್ಮ ಜಿಲ್ಲೆಯ ಶಾಸಕರನ್ನು ಒಂದು ದಿವಸ ಕರೆಯಲಿ. ಬೇಕಾದರೆ ನಾವು ಈ ಬಗ್ಗೆ ಮಾಹಿತಿ ಕೊಡುತ್ತೇವೆ. ಈ ಬಗ್ಗೆ ಒಂದು ದಿನ ಅರ್ಧ ಗಂಟೆ ಚರ್ಚೆಗೆ ಇಡಿ. ಇದಕ್ಕೆ ಸಭಾ ನಾಯಕರು ಒಪ್ಪಿಕೊಂಡಿದ್ದಾರೆ. ಇದನ್ನು ಬೇಕಾದರೆ convert ಮಾಡಿ ಚರ್ಚೆಗೆ ಇಡಿ.

(ಗೊಂದಲ)

ಅಧ್ಯಕ್ಷರು : convert ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾಡಬಹುದು. ಮಾಡಿ. ಹಲವಾರು ವಿಷಯಗಳನ್ನು ನೀವು ಮಾಡಿದ್ದೀರಿ. ದಯಮಾಡಿ, ಇದು important ವಿಷಯ. ಅರ್ಧ ಗಂಟೆ ಅಥವಾ ಒಂದು ಗಂಟೆ ಚರ್ಚೆ ಮಾಡಿ. ಇದು ನಿಮಗೂ ಗೊತ್ತಿದೆ. ನಿಮ್ಮಲ್ಲೂ ಮಳೆ ಜಾಸ್ತಿಯಾಗಿದೆ. ಎಲ್ಲಾ ಕಡೆಗಳಲ್ಲಿ ಮರ ಬಿದ್ದಿವೆ. ದಯಮಾಡಿ ಒಂದು ಗಂಟೆ ಚರ್ಚೆಗೆ ಕೊಡಬೇಕು. ಮೈಸೂರು ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕರು ಯಾರಿದ್ದಾರೆ ಅವರಿಗೆ ನಿರ್ದೇಶನ ಕೊಡಬೇಕು.

ಶ್ರೀ ಎಚ್. ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಒಂದು ಸಲಹೆ ಕೊಡುತ್ತೇನೆ. ತಮಗೆ ಅನುಕೂಲವಾಗುತ್ತದೆ. ಏನಾಗಿದೆ ಎಂದರೆ 72 ಗಂಟೆಯೊಳಗೆ ಮತ್ತು 24 ಗಂಟೆಯೊಳಗೆ replace ಮಾಡುತ್ತೇವೆ ಎಂದು ಹೇಳುವುದು circular ನಲ್ಲಿ ಇದೆಯೇ ಹೊರತು ಕಾರ್ಯಗತ ಮಾಡುವ ಹಂತದಲ್ಲಿ ಇದು ಸಾಧ್ಯವಾಗುತ್ತಿಲ್ಲ. ಇದಕ್ಕೆ ಮೂಲ ಕಾರಣವೇನೆಂದರೆ, ಅಕ್ರಮ ಸಕ್ರಮ ಎಂದು ಏನು ಇದೆ, ಅದಕ್ಕೆ ಸರ್ಕಾರ ಒಂದು ಇತಿಶ್ರೀ ಹಾಡಬೇಕು. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಏನಾಗಿದೆ ಎಂದರೆ, ಯಾರು ಬೇಕಾದರೂ ಖಾಸಗಿಯಾಗಿ ಬೋರ್‌ವೆಲ್‌ಗಳನ್ನು ಹಾಕಿಕೊಂಡು ಪಂಪ್‌ಸೆಟ್‌ಗೆ ಸರ್ವೀಸ್ ತೆಗೆದುಕೊಳ್ಳುವಂತಹ ಒಂದು ಅವಕಾಶವನ್ನು ಸರ್ಕಾರದ ವಿದ್ಯುತ್ ಕಂಪೆನಿಯವರು ಮಾಡಿಕೊಟ್ಟಿದ್ದಾರೆ. ಹಾಗಾಗಿ ಏನಾಗಿದೆ ಎಂದರೆ, ಈಗ ನಾನು ಒಂದು ಬೋರ್‌ವೆಲ್ ಅನ್ನು ಹಾಕಿಸುತ್ತೇನೆ. ನನಗೆ ಅಧಿಕೃತವಾಗಿ ಸಂಪರ್ಕ

ಕೊಡುವುದಿಲ್ಲ. ಆಗ ನಾನು ಅನಧಿಕೃತವಾಗಿ ವಿದ್ಯುತ್ ಸಂಪರ್ಕ ತೆಗೆದುಕೊಳ್ಳುತ್ತೇನೆ. ನನ್ನ ರೀತಿಯಲ್ಲಿ ಈ ರೀತಿ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ತೆಗೆದುಕೊಳ್ಳುವ ನಾಲ್ಕಾರು ಜನರನ್ನು ಸೇರಿ ಒಂದು ಟಿ.ಸಿ. ಮೇಲೆ over load ಆಗುತ್ತದೆ. over load ಅದಾಗ ಸಹಜವಾಗಿ ಟಿ.ಸಿ. ಸುಟ್ಟುಹೋಗುತ್ತದೆ. ಇದಕ್ಕೆ ಒಂದು ಪರ್ಯಾಯ ಮಾರ್ಗ ಹುಡುಕುವಂತಹ ಕಾರ್ಯಕ್ರಮವನ್ನು ಈ ಇಲಾಖೆಯವರು ಮಾಡುತ್ತಿಲ್ಲ. ಆದ್ದರಿಂದ, ನೀವು ಈ ಅಕ್ರಮ ಸಕ್ರಮಕ್ಕೆ ಒಂದು deadline ಹಾಕಿ. ಯಾರ್ಯಾರು ಇದುವರೆಗೆ ಅಕ್ರಮವಾಗಿ ತೆಗೆದುಕೊಂಡಿದ್ದಾರೆ, ಅದನ್ನೆಲ್ಲಾ regularize ಮಾಡಿ. ಅದಕ್ಕೆ ಎಷ್ಟು ಅವಶ್ಯಕತೆ ಇದೆ ಅಷ್ಟು ಟಿ.ಸಿ.ಗಳನ್ನು ಅಳವಡಿಸಿ. ಇನ್ನು ಮುಂದೆ ಟಿ.ಸಿ. ಹೋದರೆ ನಾವು ಈ ರೀತಿಯ ಕ್ರಮವನ್ನು ಅನುಸರಿಸುತ್ತೇವೆ ಎಂದು ಒಂದು ನಿರ್ದಿಷ್ಟವಾದ ಕ್ರಮವನ್ನು ಸರ್ಕಾರ ಅನುಸರಿಸಬೇಕು. ಇಲ್ಲದಿದ್ದರೆ ನಿರಂತರವಾಗಿ ಟಿ.ಸಿ.ಗಳು ಸುಡುತ್ತಿರುತ್ತವೆ. ರೈತರು ಮತ್ತೆ ಮತ್ತೆ ಅರ್ಜಿ ಕೊಡುತ್ತಿರುತ್ತಾರೆ. ಅದಕ್ಕೆ ಪರ್ಯಾಯ ಮಾರ್ಗವಿಲ್ಲದೇ ರೈತರು ಸಂಕಷ್ಟಕ್ಕೆ ಒಳಗಾಗುವು ಪರಿಸ್ಥಿತಿ ಬರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಈ ಮನೆಯಲ್ಲಿರುವಂತಹ ಎಲ್ಲಾ ಸದಸ್ಯರ ಮನಸ್ಸಿನಲ್ಲಿ ಇರುವಂತಹದ್ದು. ಕೆಲವು ಪ್ರಶ್ನೆ ಕೇಳಬಹುದು. ಸಮಯ ಅಭಾವವಿರಬಹುದು. ಇದು ಬಹಳ ಪ್ರಮುಖವಾದ ಪ್ರಶ್ನೆ. ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಏಪ್ರಿಲ್ ನಿಂದ ಜೂನ್–10ರವರೆಗೆ number of transformers failed-606, replaced-465, to be replaced, replace ಆಗಬೇಕಾಗಿರುವಂತಹದ್ದು, 25 ಕೆ.ವಿ. ಇರುವುದು 31, 63 ಕೆ.ವಿ. ಇರುವುದು 70 ಹಾಗೂ 100 ಕೆ.ವಿ. ಇರುವುದು 40. 141 ಆಗಬೇಕು. ಎರಡನೆಯದಾಗಿ, ಮಾನ್ಯ ಜಯಚಂದ್ರರವರು ಕೆ.ಇ.ಬಿ.ಯಿಂದ ಆಯಿಲ್ ಸಪ್ಲೈ ಆಗಿಲ್ಲ. ರಿಪೇರಿಯಾದರೂ ದುಡ್ಡು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಹೊಸ ಟ್ರಾನ್ಸ್ ಫಾರ್ಮರ್ ಕೊಡುವುದಕ್ಕೆ ದುಡ್ಡಿಲ್ಲ ಎಂದು ಹೇಳಿದ್ದೀರಿ. ಮಾನ್ಯ ರೇವಣ್ಣನವರೆ, ಭಗವಂತನ ದಯೆಯಿಂದ ನಮ್ಮ ಹತ್ತಿರ ದುಡ್ಡಿದೆ. ಹಣಕಾಸಿನ ಸ್ಥಿತಿ ಚೆನ್ನಾಗಿದೆ. ಈ ಅಧಿವೇಶನ

ಮುಗಿಯುವುದರೊಳಗಾಗಿ ಕೊನೆಯ ದಿವಸ ಅಂದರೆ ನಾನು replay ಮಾಡುವ ದಿವಸ ಈ ಆಯಿಲ್ ಸಪ್ಲೈ ಮಾಡುವಂತಹದ್ದು, ರಿಪೇರಿಯಾಗಿರುವುದಕ್ಕೆ ಬಾಕಿ ದುಡ್ಡನ್ನು ಕೊಡುವಂತಹದ್ದು, ಈ ವ್ಯವಸ್ಥೆ ಮಾಡಿ

ಶ್ರೀ ಹೆಚ್. ಡಿ. ರೇವಣ್ಣ : ಹೊಸ ಟ್ರಾನ್ಸ್‌ಫಾರ್ಮರ್ ಕೊಡುವಂತಹದ್ದು?

ಶ್ರೀ ಬಿ. ಎಸ್. ಯಡಿಯೂರಪ್ಪ : ಒಂದು ನಿಮಿಷ ಸ್ವಾಮಿ. ಏಕೆ ಹಾಗೆ ಮಾಡುತ್ತೀರಿ? ನೀವು ಅನುಭವ ಇರುವವರು. ನಾನು ಬಹಳ ದೂರ ಹೇಳಲಿಲ್ಲ. ಈ ಬಜೆಟ್‌ಗೆ ಉತ್ತರ ಕೊಡುವುದರ ಒಳಗಾಗಿ ಆಯಿಲ್ ಕೊರತೆ ಇದ್ದರೆ ಆಯಿಲ್ ಕೊಡುವಂತಹದ್ದು, ರಿಪೇರಿ ಆಗಿರುವುದಕ್ಕೆ ಡುಡ್ಡು ಕೊಡಿಸುವಂತಹ ವ್ಯವಸ್ಥೆ ಮಾಡುವಂತಹದ್ದು, ಅಗತ್ಯ ಇರುವಂತಹ ಟ್ರಾನ್ಸ್ ಫಾರ್ಮರ್‌ಅನ್ನು ಖರೀದಿ ಮಾಡುವುದಕ್ಕೆ ವ್ಯವಸ್ಥೆ ಮಾಡುವಂತಹುದರ ಬಗ್ಗೆ ಹೇಳುತ್ತೇನೆ ಏಕೆಂದರೆ, ನಮ್ಮ ಇಲಾಖೆಯಲ್ಲಿ ಇರುವಂತಹವರು ನಮ್ಮ ಅತ್ಮೀಯರೇ ಇರುವುದು. ಅವರನ್ನೇ ನಾನು ಇಟ್ಟುಕೊಡಿದ್ದೇನೆ. ಎಲ್ಲಾ ಮಾಹಿತಿ ನಿಮ್ಮ ಹತ್ತಿರ ಇರುತ್ತದೆ. ಇವತ್ತಿನಿಂದ ನಾನು ಕಾರ್ಯಪ್ರವೃತ್ತನಾಗಿ ಇಡೀ ರಾಜ್ಯದ ಈ ಜ್ವಲಂತ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಎಲ್ಲರಿಗೂ ನಾನು ಈ ಮನೆಯಲ್ಲಿ ಅತ್ಯಂತ ವಿನಯದಿಂದ ಹೇಳುತ್ತಿದ್ದೇನೆ. ದಯಮಾಡಿ ಸಹಕರಿಸಿ.

(ಗೊಂದಲ)

ಅಧ್ಯಕರು: ಮಾನ್ಯ ಶಿವಲಿಂಗೇಗೌಡರ ಪ್ರಶ್ನೆ ಇದೆ. ಒಂದು ವಾರ ಟೈಮ್ ಕೇಳಿದ್ದಾರೆ. 15 ದಿವಸ ಟೈಮ್ ಕೇಳಿದ್ದಾರೆ. ಒಂದು ವಾರದೊಳಗೆ ಉತ್ತರ ಕೊಡಬೇಕು. ಸಮಯ ಕೇಳಿದ್ದಾರೆ. ಒಂದು ವಾರ ಟೈಮ್ ಕೊಟ್ಟಿದ್ದೇನೆ ಅಷ್ಟೆ. ನಾನು ಎಲ್ಲಾ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ಯಾರೂ ಈ ತರಹ ಕಾಲಾವಕಾಶ ಕೇಳಬೇಡಿ.

ಬೆಂಗಳೂರಿನಲ್ಲಿ ಬಿಡಿಎ ವತಿಯಿಂದ ಅನಧಿಕೃತ ಕಟ್ಟಡಗಳ ತೆರವುಗೊಳಿಸುವುದರ ಬಗ್ಗೆ.